ಸ್ವಲ್ಪ ಒತ್ತು ಕೊಟ್ಟು ನೋಡಿದರೆ ಭವಿಷ್ಯದ ದಿಮಾನದಲ್ಲಿ ಬರುವ ತಪ್ಪನ್ನು ತಾವು ತಿದ್ದಿಕೊಳ್ಳಬಹುದೆಂದು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತಂದು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

2) ಗಮನ ಸೆಳೆಯುವ ಸೂಚನೆ

ವಿಷಯ: ಮೌಂಟ್ ಎವರೆಸ್ಟ್ ಏರಿ ಕಣ್ಮರೆಯಾಗಿರುವ ವಾಯುದಳದ ಅಧಿಕಾರಿ ಶ್ರೀ ಎಸ್.ಎಸ್.ಚೈತನ್ಯ ಅವರ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ಉಪಾಧ್ಯಕ್ಷರೆ, ಹಿಮಾಲಯ ಪರ್ವತನ್ನೇರಿ ಕಣ್ಮರೆಯಾದಂತಹ ವಾಯುದಳದ ಅಧಿಕಾರಿ ಶ್ರೀ ಎಸ್.ಎಸ್. ಚೈತನ್ಯರವರ ಬಗ್ಗೆ ಬಹಳ ಪ್ರಾಮುಖ್ಯವಾದ ವಿಚಾರವನ್ನು ನಾನು ಮತ್ತು ಈಶ್ವರಪ್ಪನವರು ಸದನದ ಗಮನಕ್ಕೆ ತರುತ್ತಿದ್ದೇನೆ.

ಮಾನ್ಯ ಸದಸ್ಯರು :– ನಮಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡಿ, ಎರಡು ದಿವಸಗಳಿಂದ ನಾವು ಕಾಯುತ್ತಿದ್ದೇವೆ. ನಮಗೆ ನಮ್ಮ ಭಾಗದ ಸಮಸ್ಯೆಗಳನ್ನು ಹೇಳಲಿಕ್ಕೆ ಅವಕಾಶವನ್ನು ಕೊಡಬೇಕು.

ಉಪಾಧ್ಯಕ್ಷರು :– ಈಗ ಅದನ್ನು ಮುಗಿಸಿಬಿಡಿ. 3.00 ಗಂಟೆಗೆ ಬೇಡಿಕೆಗಳ ಮೇಲೆ ಬೇಕಾದಷ್ಟು ಚರ್ಚೆಯಿದೆ. ಆಗ ಚರ್ಚಿಸೋಣ.

ಶ್ರೀ ವಾಟಾಳ್ ನಾಗರಾಜ್ :– ಒಂದು ನಿಮಿಷ. ಈಗ ಹಿಮಾಲಯ ಪರ್ವತವನ್ನು ಏರಿ ಕಣ್ಮರೆಯಾಗಿರುವ ವಾಯುದಳದ ಅಧಿಕಾರಿ ಶ್ರೀ ಎಸ್.ಎಸ್.ಚೈತನ್ಯರವರ ಬಗ್ಗೆ ಈಗ ತನಿಖೆಯನ್ನು ಕೈಬಿಟ್ಟಿದ್ದಾರೆ. ವಾಯುದಳದವರು ಕೇಂದ್ರ ಸರ್ಕಾರನವರು ಎಲ್ಲರೂ ತನಿಖೆಯನ್ನು ಕೈಬಿಟ್ಟಿದ್ದಾರೆ. ಚೈತನ್ಯ ಕನ್ನಡದ ಒಬ್ಬ ವೀರ. ಅವರು ಹಿಮಾಲಯ ಪರ್ವತವನ್ನು ಏರಿ ಕನ್ನಡ ಧ್ವಜವನ್ನು ಅಲ್ಲಿ ಹಾರಿಸಿ ಸಿರಿಗನ್ನಡಂ ಗಲ್ಗೆ ಎಂದು ಬರೆದು, ನಮ್ಮ ರಾಜ್ಯಕ್ಕೆ ಕೀರ್ತಿಯನ್ನು ತಂದಂತಹ ಒಬ್ಬ ಅಧಿಕಾರಿ. ಈ ಅಧಿಕಾರಿಯ ಬಗ್ಗೆ ಈಗ ಸಂಪೂರ್ಣವಾಗಿ ತನಿಖೆಯನ್ನು ಮುಚ್ಚಿಟ್ಟಿದ್ದಾರೆ. ಅವರ ಉಡುಪುಗಳನ್ನು ತಂದು ಮನೆಗೆ ಕೊಟ್ಟಿದ್ದಾರೆ. ಇದು ಸರಿಯಾದ ವಿಚಾರವಲ್ಲ. ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಯವರು ಕೂಡಲೇ ಕೇಂದ್ರ ಸರ್ಕಾರದ ದಂಡಿನ ಮಂತ್ರಿಗಳ ಜೊತೆಯಲ್ಲಿ ಮಾತನಾಡಬೇಕು, ಪ್ರಧಾನ ಮಂತ್ರಿಗಳ ಜೊತೆಯಲ್ಲಿ ಮಾತನಾಡಬೇಕು, ಮಾತನಾಡಿ ಮತ್ತೆ ತನಿಖೆಯನ್ನು ಆರಂಭ ಮಾಡಬೇಕು. ಇದರ ಜೊತೆಗೆ ಅವರ ಸಂಸಾರಕ್ಕೆ ಕನಿಷ್ಟ 25 ಲಕ್ಷ ರೂಪಾಯಿಗಳ ಪರಿಹಾರವನ್ನು ಕರ್ನಾಟಕ ಸರ್ಕಾರ ಕೊಡಬೇಕು. ಮತ್ತು

ಅವರ ಮನೆಯವರಿಗೆ ಸರ್ಕಾರ ಒಂದು ಕೆಲಸವನ್ನು ಕೊಡಬೇಕು. ಮಾನ್ಯ ಮುಖ್ಯಮಂತ್ರಿಗಳನ್ನು ನಾನು ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತೇನೆ, ತಮ್ಮ ನಾಯಕತ್ವದಲ್ಲಿ ಅವರ ಮನೆಗೆ ಭೇಟಿ ಮಾಡಿ ಅವರ ಮನೆಗೆ ಸಾಂತ್ವನ ಹೇಳಬೇಕು, ಮತ್ತು ಕರ್ನಾಟಕ ಸರ್ಕಾರ ಕಡ್ಡಾಯವಾಗಿ 25 ಲಕ್ಷ ರೂ.ಗಳನ್ನು ಕೊಡಬೇಕು ಎಂದು ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಕೇಂದ್ರ ಸರ್ಕಾರಕ್ಕೂ ಸರ್ವಪಕ್ಷದ ನಿಯೋಗವನ್ನು ಕರೆದುಕೊಂಡು ಹೋಗಿ ಪ್ರಧಾನ ಮಂತ್ರಿಗಳಿಗೆ ಹೇಳಬೇಕು, ದಂಡಿನ ಮಂತ್ರಿಗಳಿಗೆ ಹೇಳಬೇಕು ಮತ್ತೆ ಸಮಗ್ರವಾಗಿ ತನಿಖೆಯನ್ನು ಆರಂಭ ಮಾಡಬೇಕು. ಅವರು ತನಿಖೆಯನ್ನು ಆರಂಭ ಮಾಡಲಿಲ್ಲ ಅಂದರೆ ಅದರ ಖರ್ಚನ್ನು ಕರ್ನಾಟಕ ಸರ್ಕಾರವೇ ಕೊಡುವುದಕ್ಕೆ ತಯಾರಾಗಿರಬೇಕು ಎಂದು ಹೇಳಿ ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕಳಕಳಿಯಿಂದ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) :– ಮಾನ್ಯ ಅಧ್ಯಕ್ಷರೆ, ಇವತ್ತೆ ನನ್ನ ಒಂದು ಗಮನ ಸೆಳೆಯುವ ಸೂಚನೆ ಇದೇ ವಿಚಾರದಲ್ಲಿ ಇತ್ತು. ಇದು ಏನಾಗಿದೆ ಅಂದರೆ ಕಳೆದ ವಾರ ನಾನು ಡಾ॥ ವಾಣಿ (ಚೈತನ್ಯರವರ ಪತ್ನಿ) ಅವರನ್ನು ಅವರ ಮನೆಗೆ ಹೋಗಿ ಭೇಟಿ ಮಾಡಿದೆ. ಅವರಿಗೆ ಮಾನ್ಯ ಅಧ್ಯಕ್ಷರೇ ಎರಡು ತಿಂಗಳ ಕೂಸು ಇದೆ. ಇನ್ನೂ ಎಳೆಯ ವಯಸ್ಸು, ಡೆಂಟಲ್ ಡಾಕ್ಟರ್ ಅಯಮ್ಮ, ಅವರ ಮನೆಗೆ ಅನೇಕ ಪ್ರಮುಖರು ಭೇಟಿ ಮಾಡಿ ಬಂದಿದ್ದಾರೆ. ಎಲ್ಲರೂ ಸಾಂತ್ವನ ಮಾತ್ರ ಹೇಳಿ ಬರುತ್ತಿದ್ದಾರೆ. ಅವರ ಮನೆಯ ಪರಿಸ್ಥಿತಿಯನ್ನು ನೋಡಿಬಿಟ್ಟರೆ ನಿಜಕ್ಕೂ ಯಾವುದೇ ವ್ಯಕ್ತಿಗೆ ಕರಳು ಕಿತ್ತು ಬರುತ್ತದೆ. ಅವರು ಅವರ ತಂದೆಯ ಮನೆಯಲ್ಲಿ ಆಶ್ರಯ ಪಡೆದಿದ್ದಾರೆ. ಅವರ ತಂದೆಗೆ ಹೋದ ವಾರ ಎದೆ ನೋವು ಎಂದು ಹೇಳಿದರು. ಅವರನ್ನು ನಾನು ಮಾನ್ಯ ಮುಖ್ಯಮಂತ್ರಿಗಳ ಮುಖಾಂತರ ಮಾತನಾಡಿಸಿ, ಅವರಿಗೆ ಆಪರೇಷನ್ ಮಾಡಿಸಬೇಕು ಎಂದು ಯೋಚನೆ ಮಾಡುತ್ತಿದ್ದಂತೆಯೇ ಇದ್ದಕ್ಕಿದ್ದಂತೆ ಮೂರು ದಿನದ ಕೆಳಗೆ ಅವರಿಗೆ ಎದೆ ನೋವು ಜಾಸ್ತಿಯಾಗಿ ಆಸ್ಪತ್ರೆಗೆ ಅಡ್ಮೀಟ್ ಆಗಿ ಆಪರೇಷನ್ ಮಾಡಿಸಿಕೊಂಡಿದ್ದಾರೆ. 90 ಸಾವಿರ ರೂಪಾಯಿಗಳ ಬೆಲೆ ಆಗಿದೆ, ಒಂದು ರೂಪಾಯಿ ಕಟ್ಟುವಂತಹ ಸ್ಥಿತಿಯಲ್ಲಿ ಇಲ್ಲ. ಚೈತನ್ಯರವರ ಪತ್ನಿಗೆ ಇವತ್ತು ಗಂಡ ಎಲ್ಲಿದ್ದಾರೆ ಎಂದು ಗೊತ್ತಿಲ್ಲ. ಹೀಗಾಗಿ ಅವರಿಗೆ ಸಂಬಳ ಬರುತ್ತಿಲ್ಲ, ಪೆನ್‌ಷನ್ ಬರುತ್ತಿಲ್ಲ. ಈ ಹೆಣ್ಣು ಮಗಳ ಗತಿ ಏನು? ಅವರು ಹೇಗೆ ಜೀವನ ಮಾಡಬೇಕು? ತಂದೆ ಆಶ್ರಯ ಕೊಡುವಂತಹ ಸ್ಥಿತಿಯಲ್ಲಿ ಇಲ್ಲ. ಅವರ ತಂದೆ ರಿಟೈರ್ಡ್ ವಿ ಐ ಎಸ್ ಎಲ್ ಅಧಿಕಾರಿ, ಹಾಗಾಗಿ ಅವರಿಗೂ ಪೆನ್‌ಷನ್ ಬರುತ್ತಿಲ್ಲ. ಅವರ ತಂದೆಗೇ ಆಪರೇಷನ್ ಮಾಡಿಸಿಕೊಂಡಿರುವುದಕ್ಕೆ ದುಡ್ಡು ಕೊಡದೇ ಇರುವ ಸ್ಥಿತಿಯಲ್ಲಿ ಡಾ॥ ವಾಣಿಯವರನ್ನು (ಚೈತನ್ಯರವರ ಪತ್ನಿ) ಸಾಕುವವರು ಯಾರು? ಎರಡು ತಿಂಗಳ

ಕೂಸು ಏನಿದೆ ಅದನ್ನು ಸಾಕುವವರು ಯಾರು? ಇಂತಹ ಪರಿಸ್ಥಿತಿಯಲ್ಲಿ ಇವತ್ತು ಆ ಕುಟುಂಬ ಇದೆ. ಅವರ ಗಂಡ ಚೈತನ್ಯರವರು ವಾಯುದಳದ ಅಧಿಕಾರಿಯಾಗಿ ಕರ್ನಾಟಕದ ಮೊದಲನೇ ಒಬ್ಬ ಕನ್ನಡಿಗ ಮೌಂಟ್ ಎವರೆಸ್ಟ್‌ನ್ನು ಹತ್ತಿ ಅಲ್ಲಿ ಸಿರಿಗನ್ನಡಂ ಗೆಲ್ಗೆ ಎನ್ನುವ ಧ್ವಜವನ್ನು ಹಾರಿಸಿದಂತಹ ಕೀರ್ತಿ, ಮತ್ತು ಇಡೀ ಕರ್ನಾಟಕ ರಾಜ್ಯ ಹೆಮ್ಮೆ ಪಡುವಂತಹ ಮೊಧಲನೇ ಕನ್ನಡಿಗ ಅಂತ. ಆತ ಇವತ್ತು ಕಣ್ಮರೆಯಾಗಿರುವಂತಹ ಸಂದರ್ಭದಲ್ಲಿ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುವುದು ಇಷ್ಟೇ, ಈ ರಜಲ್‌ಪ್ರೈಸ್ ಎನ್ನುವಂತಹ ಒಂದು ಸಂಸ್ಥೆ ಏನಿದೆ. ಆ ಸಂಸ್ಥೆಗೆ ಇದನ್ನು ತನಿಖೆ ಮಾಡಲು ಅವಕಾಶ ಮಾಡಿಕೊಟ್ಟರೆ ಖಂಡಿತ ಆ ಸಂಸ್ಥೆ ಚೈತನ್ಯ ಅವರು ಬದುಕಿರುವ ಅಂಶವನ್ನು ಹುಡುಕಿ ತೆಗೆಯುವುದಕ್ಕೆ ಅವಕಾಶವಾಗುತ್ತದೆ. ಕೇಂದ್ರ ಸರ್ಕಾರ ಈ ಕೆಲಸವನ್ನು ಮಾಡಬೇಕು. ಅವರು ಮಾಡುವುದಕ್ಕೆ ಆಗಲಿಲ್ಲ. ಅಂದರೆ ಕರ್ನಾಟಕ ರಾಜ್ಯ ಸರ್ಕಾರದವರೂ ಮಾಡಲಿ, ಏಕೆಂದರೆ ಅದಕ್ಕೆ ಹಣಕಾಸು ಸ್ವಲ್ಪ ಜಾಸ್ತಿಯಾಗಬಹುದು. ಆದರೆ ಒಬ್ಬ ಕನ್ನಡಿಗ ಇಡೀ ಪ್ರಪಂಚಕ್ಕೆ ಈ ಕೀರ್ತಿಯನ್ನು ತರುತ್ತಿರತಕ್ಕಂಥ ಸಂದರ್ಭದಲ್ಲಿ ರಾಜ್ಯ ಸರ್ಕಾರ ಈ ದಿಕ್ಕಿನಲ್ಲಿ ಆ ರಜಲ್‌ಪ್ರೈಸ್ ಎನ್ನುವಂತಹ ಸಂಸ್ಥೆಗೆ ಅದನ್ನು ತನಿಖೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಖಂಡಿತ ಚೈತನ್ಯ ಸಿಗುತ್ತಾರೆ. ಆ ಒಂದು ದಿಕ್ಕಿನಲ್ಲಿ ರಾಜ್ಯ ಸರ್ಕಾರ ಪ್ರಯತ್ನ ಮಾಡಲಿ, ಡಾ॥ ವಾಣಿಯವರು ಡೆಂಟಲ್ ಡಾಕ್ಟರ್ ಇದ್ದಾರೆ. ಅವರು ಫಸ್ಟ್‌ಕ್ಲಾಸ್‌ನಲ್ಲಿ ಡೆಂಟಲ್ ಪಾಸಾಗಿದ್ದಾರೆ. ಅವರು ಡೆಂಟಲ್ ಡಾಕ್ಟರ್ ಆಗಿರುವುದರಿಂದ ರಾಜ್ಯ ಸರ್ಕಾರ ಒಂದು ವಿಶೇಷವಾದ ಕಾರಣಕ್ಕಾಗಿ ತಕ್ಷಣ ಅವರಿಗೆ ಒಂದು ಉದ್ಯೋಗವನ್ನು ಒದಗಿಸಿಕೊಡಬೇಕು. ಮೂರನೇಯದು ನಮ್ಮ ಸ್ನೇಹಿತರಾದ ಶ್ರೀ ವಾಟಾಳ್ ನಾಗರಾಜ್‌ರವರು ತಿಳಿಸಿದ ಪ್ರಕಾರ ಇಂತಹ ಒಬ್ಬ ಹೋರಾಟಗಾರ ಇಡೀ ಕರ್ನಾಟಕ ರಾಜ್ಯಕ್ಕೆ ಹೆಸರು ತರುತ್ತಿರುವಂತಹ ವ್ಯಕ್ತಿ, ಅವರ ಹೆಂಡತಿ ಮಕ್ಕಳು ಇವತ್ತು ನಿರ್ಗತಿಕರಾಗಲು ಬಿಟ್ಟರೆ ನಮಗ್ಯಾರಿಗೂ ಶೋಭೆ ತರುವಂತಾದ್ದು ಅಲ್ಲ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಇದೊಂದು ವಿಶೇಷ ಪ್ರಕರಣವಾಗಿರುವುದರಿಂದ 25 ಲಕ್ಷ ರೂಪಾಯಿಗಳನ್ನು ಅವರಿಗೆ ಪರಿಹಾರ ಧನವಾಗಿ ನೀಡುವ ಘೋಷಣೆ ಮಾಡಿದರೆ ಇಡೀ ಕರ್ನಾಟಕ ಅಲ್ಲ, ಇಡೀ ದೇಶಕ್ಕೆ ಈ ಒಂದು ಸರ್ಕಾರ ಒಳ್ಳೆಯ ಹೆಸರು ಪಡೆಯುವುದಕ್ಕೆ ಅವಕಾಶವಾಗುತ್ತದೆ. ಈ ದಿಕ್ಕಿನಲ್ಲಿ ಮೂರು ಬೇಡಿಕೆಗಳೇನಿವೆ, ಒಂದು ಈ ರಜಲ್‌ಪ್ರೈಸ್ ಸಂಸ್ಥೆಗೆ ಕೊಟ್ಟು ಅವರು ತನಿಖೆ ಮಾಡಲು ಅವಕಾಶ ಮಾಡಲಿ, ಎರಡನೆಯದು ಡಾ॥ ವಾಣಿಯವರಿಗೆ ಒಂದು ಉದ್ಯೋಗವನ್ನು ಕೊಡಲಿ, ಮೂರನೇಯದು 25 ಲಕ್ಷ ರೂಪಾಯಿಗಳನ್ನು ತಕ್ಷಣ ಅವರಿಗೆ ಪರಿಹಾರ ಘೋಷಣೆ ಮಾಡಲಿ ಎಂದು ಹೇಳಿ ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) :– ಮಾನ್ಯ ಅಧ್ಯಕ್ಷರೇ, ನಾನು ನಿನ್ನೆ ಟಿ ವಿ ಯಲ್ಲಿ ರಾತ್ರಿ ಕ್ರೈಂ ಡೈರಿಯನ್ನು ನೋಡುತ್ತಿದ್ದೆ. ನನಗೆ ಅತ್ಯಂತ ದುಃಖವಾಯಿತು. ಕರಳು ಕಿತ್ತು ಬರುವಂತಹ ಒಂದು ದೃಶ್ಯ. ಆ ತಂದೆ ತಾಯಿ, ಹೆಂಡತಿ ಮಕ್ಕಳು ಮನೆಯಲ್ಲಿ ಮೂರು ಜನ ಹೇಳುತ್ತಿರುವಂತಾದ್ದು ಒಂದೇ, ನಮ್ಮ ಮಾಧ್ಯಮಗಳಲ್ಲಿ ಇಷ್ಟೊಂದು ಪ್ರಚಾರ ಪಡೆದುಕೊಂಡಿತು, ಒಬ್ಬ ವಾಯುದಳದ ಅಧಿಕಾರಿ ಈ ರೀತಿ ಹೋಗಿ ಕಣ್ಮರೆಯಾಗಿರತಕ್ಕಂಥಾದ್ದು. ಅನೇಕ ರಾಜಕಾರಣಿಗಳು ನನ್ನ ಮನೆಗೆ ಬಂದರು ಬರುವಾಗ ಎಲ್ಲಾ ಟಿ ವಿ ಯವರನ್ನು ಮತ್ತು ಫೋಟೋಗ್ರಾಫರ್ಸ್‌ನ್ನು ಕರೆದುಕೊಂಡು ಬರುತ್ತಿದ್ದರು, ಬೇರೆ ಬೇರೆ ಕೋನದಿಂದ ನಮ್ಮ ಜೊತೆಗೆ ಮಾತನಾಡುತ್ತಿದ್ದಂತಾದ್ದನ್ನು ಫೋಟೋ ತೆಗೆಸಿಕೊಂಡರು, ಪತ್ರಿಕೆಗಳಲ್ಲಿ ಪ್ರಕಟವಾಯಿತು, ಟಿ ವಿ ಯಲ್ಲಿ ಪ್ರಕಟವಾಯಿತು, ಆದರೆ ನಮ್ಮ ಕುಟುಂಬಕ್ಕೆ ಏನಾಯಿತು ಎಂದು ಕೇಳುತ್ತಿದ್ದರು. ಕರ್ನಾಟಕ ರಾಜ್ಯದಿಂದ ಒಬ್ಬ ಶ್ರೇಷ್ಠವಾದಂತಹ ಅಧಿಕಾರಿ ಇಂತಹ ಒಂದು ಮಹತ್ತರವಾದ ಸಾಧನೆಯನ್ನು ಮಾಡಲಿಕ್ಕೆ ಹೊರಟವನು ಅವನ ಮಗುವಿನ ಮುಖ ಸಹ ನೋಡಲಿಲ್ಲ, ಆ ಮಗುವಿನ ಫೋಟೋ ನೋಡಿರತಕ್ಕಂಥಾದ್ದು ಅಷ್ಟ. ಎಲ್ಲಕ್ಕಿಂತ ಹೆಚ್ಚಾಗಿ ಹಿಮಾಲಯ ಸ್ಥಳದಿಂದ ತಾನು ತೆಗೆದುಕೊಂಡು ಹೋಗಿರತಕ್ಕಂಥ ಕ್ಯಾಮರಾ ಮತ್ತು ಅನೇಕ ವಸ್ತುಗಳನ್ನು ವಾಪಸ್ಸು ಕಳುಹಿಸಿದ್ದಾರೆ, ಹಾಗಾದರೆ ಅವರನ್ನು ಪತ್ತೆ ಹಚ್ಚಲಿಕ್ಕೆ ಏಕೆ ಆಗಲಿಲ್ಲ? ಇದರಲ್ಲಿ ಏನೋ ಒಂದು ದುರುದ್ದೇಶ ಅಡಗಿದೆ ಎನ್ನುವಂತಾದ್ದನ್ನು ಆ ತಂದೆ ತಾಯಿ ಮತ್ತು ಹೆಂಡತಿ ಹೇಳುತ್ತಿದ್ದಾರೆ. ನಮ್ಮ ಸರ್ಕಾರ ಕೇಂದ್ರ ಸರ್ಕಾರದ ಜೊತೆಯಲ್ಲಿ ಮಾತನಾಡಿ ಎನ್‌ಕ್ವೈರಿಯನ್ನು ಅತ್ಯಂತ ಪ್ರಾಮಾಣಿಕವಾಗಿ ಮಾಡಬೇಕು. ಏಕೆಂದರೆ ಇಂತಹ ಒಬ್ಬ ಅಧಿಕಾರಿ ಕಣ್ಮರೆಯಾದಾಗಲೂ ಕೂಡ ಹುಡುಕಿ ಕನಿಷ್ಟ ಅವರ ಶವವನ್ನಾದರೂ ತಂದು ಕೊಡಲಿಕ್ಕೆ ಆಗಲಿಲ್ಲ ಅಂದರೆ ಇದರಲ್ಲಿ ಅರ್ಥವಿಲ್ಲ. ಆದ್ದರಿಂದ ಇದಕ್ಕೆ ಪರಿಹಾರದ ಹಣವನ್ನೂ ಕೂಡ ಘೋಷಣೆ ಮಾಡಬೇಕು. ಆ ಕುಟುಂಬಕ್ಕೆ ಸಾಂತ್ವನವನ್ನು ಕರ್ನಾಟಕ ರಾಜ್ಯ ಸರ್ಕಾರ ಹೇಳಬೇಕೆಂಬುದು ನನ್ನ ವಿನಂತಿ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :– ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ಈಶ್ವರಪ್ಪನವರು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದಾರೆ. ಶ್ರೀ ಚೈತನ್ಯರವರು ಮೌಂಟ್ ಎವರೆಸ್ಟ್ ಏರತಕ್ಕಂಥಾದ್ದರಲ್ಲಿ ಬಹಳ ಸಾಹಸದಿಂದ ಹೋಗಿದ್ದಾರೆ. ಇವೆಲ್ಲಾ ಈಗ ಸ್ವಲ್ಪ ಕಣ್ಮರೆಯಾಗತಕ್ಕಂಥ ಸುದ್ದಿ ಕೂಡ ಬಂದಿದೆ. ಇದು ಬಹಳ ವಿಷಾದವಾದ ಸಂಗತಿ. ಒಬ್ಬ ಸಾಹಸಿ ಯುವಕ ಹೋಗತಕ್ಕಂಥ ರೀತಿಯಲ್ಲಿ ಏನು ಆತನಿಗೆ ಯಾವ ರೀತಿಯಾಗಿ ತೊಂದರೆ ಆಯಿತು, ಬಹಳಷ್ಟು ಜನ ಹೋಗಿ ಬಂದಿದ್ದಾರೆ ಅವರಿಗೆ ಏನಾಯಿತೋ ಏನೋ, ಅವರ ಜನರೂ

ಕೂಡ ಹೋಗಿ ಬಂದಿದ್ದಾರೆ. ಅವರೂ ಸಹ ಹೇಳಿದ್ದಾರೆ. ಟಿ.ವಿ. ಯವರೂ ಕೂಡ ಅವರ ಮನೆಯಲ್ಲಿ ಅವರ ತಾಯಿ ತಂದೆಯವರಿಗೆ ಭೇಟಿಯಾಗಿ ಹೇಳಿದ್ದಾರೆ. ಇವರ ತಾಯಿ ತಂದೆಯವರೂ ಸಹ ನೇರವಾಗಿ ಗೊತ್ತು, ಶ್ರೀ ಚೈತನ್ಯರವರು ಇಂಜಿನಿಯರಿಂಗ್ ಕಾಲೇಜು, ಗುಲ್ಬರ್ಗಾದಲ್ಲಿ ಪಿ.ಡಿ.ಕೋರ್ಸ್ ಮಾಡಿದ್ದಾರೆ. ಎಂ.ಎಸ್.ಕೆ.ಮಿಲ್ ಕಾಲೋನಿಯಲ್ಲಿ ಇದ್ದರು. ಅವರೂ ಹೇಳಿದರು, ಸಾರ್ ನಮಗೆಲ್ಲಾ ಈ ರೀತಿಯಾಗಿದೆ ಎನ್ನತಕ್ಕಂಥ ರೀತಿಯಲ್ಲಿ ಅವರ ತಾಯಿಯವರಿಗೆ ತಂದೆಯವರಿಗೆ ದೂರವಾಣಿ ಮುಖಾಂತರ ಮಾತನಾಡಿದ್ದಾರೆ, ತದನಂತರ ಅಮೇರಿಕಾದಲ್ಲಿ ಅವರಿಗೆ ಒಬ್ಬರು ಸಿಸ್ಟರ್ ಕೂಡ ಇದ್ದಾರೆ. ಅವರು ಕೂಡ ನೇರವಾಗಿ ಪ್ರಣವ್ ಮುಖರ್ಜಿಯವರಿಗೆ ಭೇಟಿ ಮಾಡಲು ಬಂದಿದ್ದರು. ನಾನು ಪ್ರಣವ್ ಮುಖರ್ಜಿಯವರಿಗೆ ಖುದ್ದಾಗಿ ಮಾತನಾಡಿದೆ, ಅವರು ಹೇಳಿದರು. ಅವರ ಸಿಸ್ಟರ್ ಯಾರೋ ಇದ್ದಾರೆ ಅವರು 5 ಗಂಟೆಗೆ ಸರಿಯಾಗಿ ಬಂದು ನನಗೆ ಭೇಟಿಯಾಗುತ್ತಿದ್ದಾರೆ, ಇವೆಲ್ಲಾ ಒಂದು ತಿಂಗಳ ಹಿಂದಿನ ಮಾತು. ಸರಿಯಾದ ರೀತಿಯಲ್ಲಿ ನಾವು ಇನ್‌ವೆಸ್ಟಿಗೇಶನ್ ಮಾಡುತ್ತೇವೆಂದು ಹೇಳಿದರು. ಇಲ್ಲಿರತಕ್ಕಂಥ ಏರ್ ಕಮ್ಯಾಂಡರ್‌ಗೆ ನಮ್ಮ ಹೋಮ ಕಮೀಷನರ್ ಕೂಡ ಮಾತನಾಡಿದ್ದಾರೆ. ಅವರು ಇವರು ಕ್ಲಾಸ್‌ಮೇಟ್ಸ್, ಅವರಿಗೂ ಕೂಡ ಅವರು ಹೇಳಿದರು. ಸಾಕಷ್ಟು ಇವತ್ತು ಇದರ ಬಗ್ಗೆ ಶೋಧನೆ ಮಾಡತಕ್ಕಂಥ ಕೆಲಸ ಆಗಿದೆ, ಎಲ್ಲೂ ಕೂಡ ಏನೂ ವ್ಯತ್ಯಾಸ ಆಗಿಲ್ಲ, ಗಮನ ಕೊಟ್ಟಿದ್ದೇವೆ. ಇದೊಂದು ಆಗಿದೆ. ಇದು ಆದ ಮೇಲೆ ಇವತ್ತು ಗಮನ ಸೆಳೆಯುವ ಸೂಚನೆಯಲ್ಲಿ ಮಾನ್ಯ ಈಶ್ವರಪ್ಪನವರು ಮತ್ತು ಮಾನ್ಯ ವಾಟಾಳ್ ನಾಗರಾಜ್‌ರವರು ಇವತ್ತು ಅವರ ಹೆಂಡತಿಯವರು ಏನು ಇದ್ದಾರೆ ಅವರೂ ಕೂಡ ಬಿ ಡಿ ಎಸ್ ಮಾಡಿದ್ದಾರೆ ಎಂದು ಹೇಳಿದರು. ನಿಜವಾಗಿಯೂ ಕೂಡ ಅವರಿಗೆ ಎರಡು ತಿಂಗಳ ಮಗು ಇದೆ; ಬಹಳ ತೊಂದರೆಯಾಗಿದೆ. ಇದಕ್ಕೆ ಸರ್ಕಾರ ಅವರಿಗೆ ಒಂದು ಕೆಲಸ ಕೊಡಿಸಬೇಕು ಎನ್ನತಕ್ಕಂಥ ಮಾತು ಹೇಳಿದ್ದಾರೆ. ಮತ್ತೊಂದು 25 ಲಕ್ಷ ರೂಪಾಯಿಗಳನ್ನು ಅವರಿಗೆ ಸಹಾಯ ಮಾಡತಕ್ಕಂಥ ರೀತಿಯಲ್ಲಿ ಹೇಳಿದ್ದಾರೆ. ಇವತ್ತು 25 ಲಕ್ಷ ರೂಪಾಯಿಗಳ ಸಹಾಯ ಮಾಡತಕ್ಕಂಥಾದ್ದು ದೊಡ್ಡ ಕೆಲಸ ಅಲ್ಲ. ಸರ್ಕಾರ ಇದರ ಬಗ್ಗೆ ಮಾನವೀಯತೆಯಿಂದ ಮಾತನಾಡುತ್ತಿದ್ದೇವೆ. ಇದನ್ನು ಸಚಿವ ಸಂಪುಟದ ಮುಂದೆ ತರುತ್ತೇವೆ. ಉಪ ಮುಖ್ಯಮಂತ್ರಿಗಳು ಮತ್ತು ನಮ್ಮ ಕೈಗಾರಿಕಾ ಮಂತ್ರಿಗಳು ಇಲ್ಲೇ ಇದ್ದಾರೆ, ಅವರೊಡನೆಯೂ ಮಾತನಾಡಿದ್ದೇವೆ. ಸಚಿವ ಸಂಪುಟದಲ್ಲಿ ಇದರ ಬಗ್ಗೆ ಚರ್ಚೆ ಮಾಡಿ ಅವರಿಗೆ ಸಹಾಯ ಮಾಡತಕ್ಕಂಥಾದ್ದನ್ನು ಮಾಡುತ್ತೇವೆ. ಇಂತಹ ಒಂದು ಘಟನೆ ಇವತ್ತು ಕರ್ನಾಟಕ ರಾಜ್ಯದ ಜನತೆಗೆ ವಿಶೇಷವಾಗಿ ಅವರ ಕುಟುಂಬದವರಿಗೆ ಏನಾಗಿದೆ ಅದಕ್ಕೆ ಯಾವುದೇ ರೀತಿಯಲ್ಲಿ ಸರ್ಕಾರ ಅವರಿಗೆ ಸಹಾಯ ಮಾಡತಕ್ಕಂಥಾದ್ದು

ನಮ್ಮ ಆದ್ಯ ಕರ್ತವ್ಯ. ನಾವು ಅದನ್ನು ಮಾಡುತ್ತೇವೆ ಎನ್ನತಕ್ಕಂಥ ಆಶ್ವಾಸನೆಯನ್ನು ನಾನು ಈ ಸದನದ ಮೂಲಕ ಕೊಡುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ಆ ಕುಟುಂಬ ವರ್ಗದವರಿಗೆ 25 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಸದನದಲ್ಲಿ ಹೇಳಬೇಕು. ಅದನ್ನು ಒಪ್ಪಿಕೊಳ್ಳುವುದಕ್ಕೆ ನಾವು ಇಲ್ಲಿ ಧರಣಿ ಮಾಡಲೇಬೇಕಾಗುತ್ತದೆ, ನಿಮ್ಮ ಮೇಲೆ ನಾವೇನೂ ಒತ್ತಡ ತರಬೇಕಾಗಿಲ್ಲ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸದನದ ಬಾವಿಗೆ ಬಂದು ಧರಣಿ ನಿಂತರು)

ಶ್ರೀ ಕೆ.ಎಸ್. ಈಶ್ವರಪ್ಪ :– ಇವತ್ತಿನ ಪರಿಸ್ಥಿತಿಯಲ್ಲಿ, ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ, ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಗಮನಿಸಬೇಕು, ಮೊನ್ನೆ ಶಿವಮೊಗ್ಗದಲ್ಲಿ ಡಾ॥ ವಾಣಿ ಅವರ ತಂದೆಗೆ ಹಾರ್ಟ್ ಆಪರೇಷನ್ ಆಗಿದೆ. ಅವರಿಗೆ ಅದರ ವೆಚ್ಚವನ್ನು ಕೊಡುವುದಕ್ಕಾಗುವುದಿಲ್ಲ.

ಶ್ರೀ ಧರ್ಮಸಿಂಗ್ :– ಹಾರ್ಟ್ ಆಪರೇಷನ್‌ಗೆ ಏನು ವೆಚ್ಚವಾಗಿದೆ ಆ ಹಣವನ್ನು ಮುಖ್ಯಮಂತ್ರಿಗಳ ಪರಿಹಾರನಿಧಿಯಿಂದ ಕೊಡುತ್ತೇನೆ. ವಾಟಾಳ್ ನಾಗರಾಜ್‌ರವರೇ, ನಾನು ಏತಕ್ಕೆ ಹೇಳುತ್ತೇನೆ ಎಂದರೆ, ಪರಿಹಾರದ ಮೊತ್ತ ದೊಡ್ಡದಾಗಿರುವುದರಿಂದ....

ಶ್ರೀ ಕೆ.ಎಸ್. ಈಶ್ವರಪ್ಪ :– ನಂಜಪ್ಪ ಎಂಬ ಖಾಸಗಿ ಆಸ್ಪತ್ರೆಯಲ್ಲಿ ಹಾರ್ಟ್ ಆಪರೇಷನ್ ಆಗಿರುವುದು; ಅದು ಖಾಸಗಿ ಆಸ್ಪತ್ರೆ, ಆ ಆಸ್ಪತ್ರೆಗೆ ತಕ್ಷಣ ಒಂದು ಲಕ್ಷ ರೂ.ಹಣವನ್ನು ಪಾವತಿ ಮಾಡಬೇಕು.

ಶ್ರೀ ಧರ್ಮಸಿಂಗ್ :– ನಂಜಪ್ಪ ಖಾಸಗಿ ಆಸ್ಪತ್ರೆಗೆ ತಕ್ಷಣ ಒಂದು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ :– ಡಾ॥ ವಾಣಿ ಎಂಬುವವರು ಅವರ ತಂದೆಯ ಹತ್ತಿರ ಜೀವನ ಮಾಡುತ್ತಿರುವುದು, ಅವರ ತಂದೆಗೆ ಪೆನ್‌ಷನ್ ಬರುತ್ತಿಲ್ಲ, ಹಾಗಾಗಿ ಹತ್ತು ಲಕ್ಷ ರೂಪಾಯಿಗಳನ್ನು ತಕ್ಷಣ ರಿಲೀಸ್ ಮಾಡಿ ಸರ್, ಉಳಿದದ್ದನ್ನು ಸಚಿವ ಸಂಪಟದಲ್ಲಿ ನಿರ್ಧಾರ ಮಾಡಿಕೊಡಿ.

ಶ್ರೀ ಧರ್ಮಸಿಂಗ್ :– ಈ ಎಲ್ಲಾ ವಿಷಯಗಳು ಸಚಿವಸಂಪುಟಕ್ಕೆ ಸಂಬಂಧಿಸಿದ್ದು ಸಚಿವ ಸಂಪುಟದಲ್ಲಿ ತಾವೇನು ಇವರಿಗೆ ನೌಕರಿ ಕೊಡಬೇಕೆಂದು ಹಾಗೂ ಹಣ ಕೊಡಬೇಕೆಂದು ಕೇಳಿದ್ದೀರಿ, ಆ ಬಗ್ಗೆ ಚರ್ಚೆ ಮಾಡಿ, ಅದರ ಬಗ್ಗೆ ಕ್ರಮ ತೆಗೆದುಕೊಂಡು, ನಿಜವಾಗಿಯೂ ಕೂಡ ಅವರಿಗೆ ಸಹಾಯ ಮಾಡುತ್ತೇವೆ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಿಂದ ತೆರಳಿ ತಮ್ಮ ಸ್ಥಾನದಲ್ಲಿ ಕುಳಿತುಕೊಂಡರು)

ಅವರಿಗೆ ಈಗಾಗಲೇ ಒಂದು ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಡುತ್ತಿದ್ದೇವೆ, 25 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಮತ್ತೆ ಕೇಳಿದ್ದೀರಿ, ಆ ಬಗ್ಗೆ ಸಂಪುಟದಲ್ಲಿ ಚರ್ಚೆ ಮಾಡುತ್ತೇವೆ, ಎಷ್ಟು ಕೊಡಬೇಕೆಂದಿದ್ದೇವೆಯೋ ಅಷ್ಟನ್ನು ಕೊಟ್ಟು ಬಿಡುತ್ತೇವೆ, ಕೆಲಸವನ್ನೂ ಕೂಡ ಕೊಡಿಸುತ್ತೇವೆ.

ಶ್ರೀ ಅರಗ ಜ್ಞಾನೇಂದ್ರ :– ಇನ್ನೊಂದು ಅಂಶವನ್ನು ಹೇಳಿದರು, ನಿಮ್ಮ ಸಹೋದರರು ಮತ್ತು ಚೈತನ್ಯರವರ ತಂದೆಯವರು ಕ್ಲಾಸ್‌ಮೆಟ್ಸ್ ಎಂದು, ಅವರು ತುಂಬಾ ದೊಡ್ಡ ಪದವಿಗೆ ಹೋಗಿಬಿಟ್ಟಿದ್ದಾರೆ, ನಮ್ಮನ್ನು ಮರೆತುಬಿಟ್ಟರೋ ಏನೋ ಎಂದು ನಿನ್ನೆ ಹೇಳಿದರು.

ಶ್ರೀ ಧರ್ಮಸಿಂಗ್ :– ಅವರ ತಂದೆ ಏನು ಹೇಳಿದರೆಂದರೆ, ಡಾ॥ ಸುಬ್ಬಯ್ಯ ಎಂದು ನಮ್ಮ ಡಿಸಿಸಿ ಪ್ರೆಸಿಡೆಂಟ್ ಇದ್ದರು, ಅವರ ಮನೆಯ ಪಕ್ಕದಲ್ಲಿದ್ದರು. ನಾವು ಅಲ್ಲಿ ಹೋದಾಗ ಅವರು ಭೇಟಿಯಾಗುತ್ತಿದ್ದರೆಂದು ನೆನೆಪು ಮಾಡಿದರು.

ಶ್ರೀ ಕೆ.ಎಸ್. ಈಶ್ವರಪ್ಪ :– ತನಿಖೆಯ ಬಗ್ಗೆ ರಸಲ್‌ಪ್ರೈಸ್ ಎನ್ನುವುದೊಂದು ಸಂಸ್ಥೆ ಇದೆಯಂತೆ. ಅವರಿಗೆ ಅವಕಾಶ ಮಾಡಿಕೊಟ್ಟರೆ ಒಳ್ಳೆಯದು.

ಶ್ರೀ ಧರ್ಮಸಿಂಗ್ :– ಅದನ್ನು ಕೂಡ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :– ತನಿಖೆ ಮಾಡುವ ಬಗ್ಗೆ ತಾವು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರಬೇಕು.

ಶ್ರೀ ಧರ್ಮಸಿಂಗ್ :– ನಾವು ಮಾಡುತ್ತೇವೆ.

ಉಪಾಧ್ಯಕ್ಷರು :– ಈಗ ಕೃಷಿ ಮತ್ತು ತೋಟಗಾರಿಕೆ, ಶಿಕ್ಷಣ ಮತ್ತು ಕಾರ್ಮಿಕ ಇಲಾಖೆಗಳ ಬೇಡಿಕೆ ಬಗ್ಗೆ ಈಗಾಗಲೇ ಚರ್ಚೆ ಮುಗಿದಿದೆ. ಮಾನ್ಯ ಸದಸ್ಯರು ಮಾತನಾಡಬೇಕಾದ ವಿಷಯಗಳಿದ್ದರೆ, ಇನ್ನು ಕೆಲವು ಬೇಡಿಕೆಗಳಿದ್ದಾವೆ, ಅದರ ಮೇಲೆ ಚರ್ಚೆ ಮಾಡೋಣ; ಸರ್ಕಾರ 3.00 ಗಂಟೆಗೆ ಉತ್ತರ ಕೊಡಬೇಕು.